

“ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ಏಕರೂಪದ ಮಾರ್ಗಸೂಚಿ ಅಥವಾ ನಿಯಮಗಳನ್ನು ರೂಪಿಸಬೇಕು.

-ಎಸ್‌. ಮಹಾಲಿಂಗಯ್ಯ,
‘ಸ್ಕೈವೇ ಇಂಟರ್‌ನ್ಯಾಷನಲ್ ಟ್ರಾವೆಲ್ಸ್’ನ ನಿರ್ದೇಶಕ

ಮಾಡಲಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಹೆಚ್ಚು ಹೊತ್ತು ಕಾಯಬೇಕಾಗುತ್ತದೆ ಎಂಬ ಕಾರಣದಿಂದ ಖಾಸಗಿ ಆಸ್ಪತ್ರೆಗಳಿಂದ ಕೆಲವು ಪ್ರವಾಸಿಗರು ವರದಿಯನ್ನು ತರುತ್ತಾರೆ. ₹200, ₹300 ಕೊಟ್ಟು, ಪರೀಕ್ಷೆ ಮಾಡಿಸದೆಯೂ ನೆಗೆಟಿವ್ ವರದಿ ತರುತ್ತಿದ್ದಾರೆ’ ಎಂದು ಕೊಡಚಾದ್ರಿಯ ‘ಅಕ್ಷಯ್ ಹೋಮ್‌ಸ್ಟೇ’ ಮಾಲೀಕ ಹಂಸ ಭಟ್ ಹೇಳಿದರು.

‘ದುಡ್ಡು ಇದ್ದವರು ಈ ರೀತಿ ವರದಿ ತೆಗೆದುಕೊಂಡು ಬರುತ್ತಾರೆ. ಹಳ್ಳಿಗಳಿಂದ ಬರುವ ಅನೇಕರಿಗೆ ಈ ರೀತಿಯೆಲ್ಲ ವರದಿ ತೆಗೆದುಕೊಳ್ಳಬಹುದು ಎಂಬುದೂ ಗೊತ್ತಿರುವುದಿಲ್ಲ. ಅಲ್ಲದೆ, ಪ್ರವಾಸದ ಖರ್ಚಿನ ಜೊತೆಗೆ, ಪರೀಕ್ಷಾ ವರದಿಗೂ ನೂರಾರು ರೂಪಾಯಿ ಖರ್ಚು ಮಾಡಲು ಮನಸಿರುವುದಿಲ್ಲ. ಪ್ರವಾಸಕ್ಕೆ ಬಂದ ಅನೇಕರು, ಪ್ರೇಕ್ಷಣೀಯ ಸ್ಥಳಗಳನ್ನು ನೋಡದೇ ಹಿಂದಿರುಗಿದ್ದೂ ಉಂಟು’ ಎಂದ ಹಂಸ ಭಟ್‌ರ ಮಾತುಗಳು ವ್ಯವಸ್ಥೆಯ ಲೋಪಗಳತ್ತ ಬೆರಳು ತೋರುತ್ತವೆ.

## ವಿದೇಶಿಗರನ್ನು ಕಾಣದೆ ‘ಮಂಕಾದ’ ಸ್ಮಾರಕಗಳು

ಬಾದಾಮಿ, ಪಟ್ಟದಕಲ್ಲು, ಐಹೊಳೆಯಂತಹ ಊರುಗಳಲ್ಲಿ ಹೆಚ್ಚು ನಿರ್ಬಂಧಗಳಿಲ್ಲ. ಕೋವಿಡ್ ಪರೀಕ್ಷಾ ವರದಿಯೂ ಕಡ್ಡಾಯವಲ್ಲ. ಆದರೂ, ಅಲ್ಲಿ ಪ್ರವಾಸಿಗರ ಸಂಖ್ಯೆ ನಿರೀಕ್ಷೆಯಷ್ಟು ಹೆಚ್ಚಾಗಿಲ್ಲ. ದೇಶದ ಬೇರೆ ಬೇರೆ ರಾಜ್ಯಗಳ, ರಾಜ್ಯದ ಬೇರೆ ಜಿಲ್ಲೆಗಳ ಪ್ರವಾಸಿಗರಿಗಿಂತ ವಿದೇಶಿಗರು ಹೆಚ್ಚು ಬಂದರೆ ಇಲ್ಲಿನ ಆರ್ಥಿಕ ಚಟುವಟಿಕೆಗಳು ಚುರುಕು ಪಡೆಯುತ್ತವೆ. ಏಕೆಂದರೆ, ದೇಶಿಗರಿಗೆ ₹40 ಪ್ರವೇಶ ಶುಲ್ಕವಿದ್ದರೆ, ವಿದೇಶಿಗರಿಗೆ ₹300 ಇದೆ. ಬೇರೆ ಬೇರೆ ಸೇವೆಗಳ ದರದಲ್ಲಿಯೂ ಇದೇ ರೀತಿ ವ್ಯತ್ಯಾಸವಿದೆ. ವಿದೇಶಿಗರಿಲ್ಲದೆ ಇಲ್ಲಿನ ಸ್ಮಾರಕಗಳೇ ಮಂಕಾಗಿವೆಯೇನೋ ಎಂಬಂತೆ ಈ ತಾಣಗಳು ಕಾಣುತ್ತಿವೆ.

‘ಈ ಊರುಗಳಿಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಶೇ 50ಕ್ಕಿಂತಲೂ ಕಡಿಮೆಯಾಗಿದೆ.



## ಭರವಸೆಯ ಬೆಳಕಾದ ‘ವಿಸ್ಟಾಡೋಮ್’

ಹಲವು ನಿರ್ಬಂಧಗಳು, ಸಂಕಷ್ಟಗಳಿಂದ ಸುಸ್ತಾಗಿದ್ದ ರಾಜ್ಯ ಪ್ರವಾಸೋದ್ಯಮದಲ್ಲಿ ಸ್ವಲ್ಪ ಹುರುಪು ಹೆಚ್ಚಿಸಿಕೊಳ್ಳಲು ಕಾರಣವಾಗಿದ್ದು, ವಿಸ್ಟಾಡೋಮ್ ಹವಾನಿಯಂತ್ರಿತ ಬೋಗಿಗಳು. ಬೆಂಗಳೂರಿನ ಯಶವಂತಪುರದಿಂದ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳ ನಡುವೆ ಸಂಚರಿಸಿದ ರೈಲುಗಳಲ್ಲಿ ಅಳವಡಿಸಲಾಗಿದ್ದ ಈ ಬೋಗಿಗಳು ಪ್ರವಾಸಿಗರಿಗೆ ವಿಶಿಷ್ಟ ಅನುಭವವನ್ನೇ ನೀಡಿದವು.

ಜುಲೈ 11ರಂದು ಮಂಗಳೂರಿನಿಂದ ಯಶವಂತಪುರಕ್ಕೆ, 12ರಂದು ಯಶವಂತಪುರದಿಂದ ಕಾರವಾರಕ್ಕೆ ಈ ಸೇವೆ ಆರಂಭವಾಯಿತು.

ವಿಸ್ಟಾಡೋಮ್ ಹವಾನಿಯಂತ್ರಿತ ಬೋಗಿಗಳಲ್ಲಿ ತಲಾ 44 ಆಸನಗಳಿದ್ದು, ಈವರೆಗೆ ಎಲ್ಲ ಆಸನಗಳ ಭರ್ತಿಯೊಂದಿಗೇ ರೈಲು ಸಂಚರಿಸಿದ್ದು ವಿಶೇಷ. ಯಶವಂತಪುರ–ಕಾರವಾರ ನಡುವೆ ಸಂಚಾರ ಸ್ಥಗಿತಗೊಳಿಸಲಾಗಿತ್ತು. ಆ. 16ರಿಂದ ಪುನಃ ಸಂಚಾರ ಆರಂಭವಾಗಿದೆ.

